ಕರ್ನಾಟಕ ವಿಧಾನ ಸಭೆ
ಗುರುವಾರ 4ನೇ ಮಾರ್ಚ್, 2010ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು
ಪೀಠವನ್ನು ಅಲಂಕರಿಸಿದ್ದರು

1. ಸಂತಾಪ ಸೂಚನೆ :

ವಿಷಯ : ವಿಧಾನಸಭೆಯ ಮಾನ್ಯಾ ಸದಸ್ಯ ಶ್ರೀ ಶರಣಗೌಡ ಇನಾಮ್‌ದಾರ್ ರವರ ನಿಧನದ ಬಗ್ಗೆ.

ಅಧ್ಯಕ್ಷರು : ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಸ್ವಾತಂತ್ರ್ಯ ಹಿರಿಯ ಸೇನಾನಿ ಸರ್ದಾರ್ ಶರಣಗೌಡ ಇನಾಮ್‌ದಾರ್ ಅವರು ದಿನಾಂಕ: 03.03.2010ರಂದು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಶ್ರೀಯುತರು 15ನೇ ಆಗಸ್ಟ್ 1920ರಲ್ಲಿ, ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ದುಮ್ಮದ್ರಿಯಲ್ಲಿ ಜನಿಸಿದ್ದು, ಬಿ.ಎ. ಪದವೀಧರರಾಗಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಹೋರಾಟದ ಮನೋಭಾವ ಬೆಳೆಸಿಕೊಂಡಿದ್ದು, 1938ರಲ್ಲಿ ಆರ್ಯ ಸಮಾಜದ ಕರೆಯ ಮೇರೆಗೆ "ವಂದೇ ಮಾತರಂ" ಚಳುವಳಿಯಲ್ಲಿ ಭಾಗವಹಿಸಿದ್ದರಲ್ಲದೇ ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯ ನೇತೃತ್ವ ವಹಿಸಿದ್ದರು. "ಭಾರತ ಬಿಟ್ಟು ತೊಲಗಿ" ಹೋರಾಟದಲ್ಲಿ ಪಾಲ್ಗೊಂಡಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿಯೂ ಹೋರಾಡಿ ಸೆರೆಮನೆವಾಸ ಅನುಭವಿಸಿದ್ದರು.

ಶ್ರೀಯುತರು 1952ರಲ್ಲಿ ಹೈದ್ರಾಬಾದ್ ವಿಧಾನಸಭೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದು, 1957 ಮತ್ತು 1967ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕರ್ನಾಟಕ ವಿಧಾನಸಭೆ ಜೇವರ್ಗಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಹಾಗೂ ಇವರ ವಿರೋಚಿತ ಕೆಲಸ ಕಾರ್ಯಗಳನ್ನು ಮೆಚ್ಚಿದ ಜನತೆ ಇವರನ್ನು "ಸರ್ದಾರ್" ಎಂದು ಪ್ರೀತಿಯಿಂದ ಕರೆಯುತ್ತಿದ್ದರು.

ಶ್ರೀಯುತರು ದಿನಾಂಕ: 03.03.2010ರಂದು ನಿಧನ ಹೊಂದಿದರು.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು : ಮಾನ್ಯ ಅಧ್ಯಕ್ಷರೆ, ತಾವು ತಂದಂಥ ಸಂತಾಪ ಸೂಚನೆಗೆ ಬೆಂಬಲ ವ್ಯಕ್ತಪಡಿಸುತ್ತೇನೆ. ಇವತ್ತು ಸ್ವಾತಂತ್ರ್ಯ ಹಿರಿಯ ಸೇನಾನಿ ಸರದಾರ್ ಶರಣಗೌಡ ಇನಾಮ್‌ದಾರ್‌ರವರು ನಿನ್ನೆ ನಿಧನ ಹೊಂದಿದ ಸುದ್ದಿಯನ್ನು ಕೇಳಿ ನಮ್ಮೆಲ್ಲರಿಗೂ ಬಹಳಷ್ಟು ಆಘಾತವಾಗಿದೆಯೆಂದು ನಾನು ಹೇಳಬಯಸುತ್ತಿದ್ದೇನೆ. ದಿವಂಗತ ಸರದಾರ್ ಶರಣಗೌಡ ಇನಾಮ್‌ದಾರ್‌ರವರು ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯ ನೇತೃತ್ವವನ್ನು ವಹಿಸಿದ್ದರು. ಹೀಗಾಗಿ ಅವರ ಹೋರಾಟದ ಮನೋಭಾವನೆಯಿಂದ, ಅವರ ಹೋರಾಟದ ಹಿನ್ನೆಲೆಯಿಂದ ಇವತ್ತು ಇಡೀ ಹೈದ್ರಾಬಾದ್ ಕರ್ನಾಟಕದಲ್ಲಿ ಒಬ್ಬ ಹಿರಿಯ ಧುರೀಣ ಮತ್ತು ಆ ಒಂದು ಭಾಗದ ಅಭಿವೃದ್ಧಿ ದೃಷ್ಟಿಯಿಂದ ಮತ್ತು ವಿಮೋಚನಾ ಚಳುವಳಿಯಲ್ಲಿ ನೇತೃತ್ವ ವಹಿಸಿ ಭಾಗವಹಿಸಿದ್ದರಿಂದ ಇವತ್ತು ಇಡೀ ಹೈದ್ರಾಬಾದ್ ಕರ್ನಾಟಕ ಮತ್ತು ಕರ್ನಾಟಕ ರಾಜ್ಯಕ್ಕೇ ಒಬ್ಬ ಆದರ್ಶಪ್ರಾಯ ನಾಯಕರಾಗಿ ಸರದಾರ್ ಶರಣಗೌಡ ಇನಾಮ್‌ದಾರ್‌ರವರು ನಮಗೆಲ್ಲರಿಗೂ ಮಾರ್ಗದರ್ಶಿಕರಾಗಿದ್ದರು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ದಿವಂಗತರು ಭಾರತ ಬಿಟ್ಟು ತೊಲಗಿ ಕ್ವಿಟ್ ಇಂಡಿಯಾ ಚಳುವಳಿಯ ಹೋರಾಟದಲ್ಲಿ ಕೂಡ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದರು. ಅಷ್ಟೇ ಅಲ್ಲ ಅವರು ಹೈದ್ರಾಬಾದ್ ವಿಧಾನಸಭೆಗೆ ಸ್ವತಂತ್ರ ಅಭ್ಯರ್ಥಿಯಾಗಿ 1952ರಲ್ಲಿ ಆಯ್ಕೆಯಾಗಿದ್ದರು. ಅದೇ ರೀತಿ 1957 ಮತ್ತು 1967 ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕರ್ನಾಟಕ ವಿಧಾನಸಭೆಗೆ ಜೇವರ್ಗಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಅಂದರೆ 1952, 1957 ಮತ್ತು 1967ರ ಮೂರು ಅವಧಿಯಲ್ಲಿ ಅವರು ಅವತ್ತಿನ ಪರಿಸ್ಥಿತಿಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಗೆಲ್ಲುವುದು ಬಹಳ ಕಷ್ಟಸಾಧ್ಯವೇ ಆಗಿತ್ತು. ಅಂಥದ್ದರಲ್ಲಿ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಮೂರು ಬಾರಿ ಆಯ್ಕೆಯಾಗಿದ್ದರು ಎಂದರೆ ಅವರ ಜನಪ್ರಿಯತೆ ಮತ್ತು ಅವರ ಹೋರಾಟದ ಹಿನ್ನೆಲೆ ಎಷ್ಟು ಚೆನ್ನಾಗಿತ್ತು ಎಂದು

ತೋರಿಸಿಕೊಡುತ್ತದೆ. ಅಂಥ ಶರಣಗೌಡರು ತಮ್ಮ ಇಳಿವಯಸ್ಸಿನಲ್ಲಿ ನಿನ್ನೆ ನಿಧನರಾಗಿರುವುದು ಕೇವಲ ಹೈದ್ರಾಬಾದ್ ಕರ್ನಾಟಕ ಭಾಗದ ಜನತೆಗಷ್ಟೇ ಅಲ್ಲದೇ ಇಡೀ ಕರ್ನಾಟಕದ ಜನತೆಗೆ ದೊಡ್ಡ ನಷ್ಟವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಂಥ ಒಬ್ಬ ಮಾರ್ಗದರ್ಶಕರು ನಮ್ಮ ಮಧ್ಯದಲ್ಲಿ ಇಲ್ಲದೇ ಇರುವುದು ನಮಗೆ ತುಂಬಲಾರದಂಥ ಒಂದು ಹಾನಿಯೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಹೀಗಾಗಿ ಅವರ ಆತ್ಮಕ್ಕೆ ನಾನು ಶ್ರದ್ಧಾಂಜಲಿಯನ್ನು ಅರ್ಪಿಸಿ ಮತ್ತು ಅವರ ಅಗಲಿಕೆಯಿಂದ ಉಂಟಾಗಿರುವ ದು:ಖವನ್ನು ಭರಿಸತಕ್ಕ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಭಗವಂತ ದಯಪಾಲಿಸಲೆಂದು ಪ್ರಾರ್ಥಿಸಿ ಈ ಸಂದರ್ಭದಲ್ಲಿ ನಾನು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ತಾವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಮಾಜಿ ಸದಸ್ಯರಾದಂಥ, ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸರದಾರ್ ಶರಣಗೌಡ ಇನಾಮ್‌ದಾರ್‌ರವರು ನಿನ್ನೆ ಮರಣ ಹೊಂದಿದ್ದಾರೆ. ನಮ್ಮನ್ನೆಲ್ಲರನ್ನೂ ಬಿಟ್ಟು ಅವರು ಅಗಲಿದ್ದಾರೆ. ಇವರು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಜನಿಸಿದಂಥವರು. 1938ನೇ ಇಸವಿಯಲ್ಲಿ ಇವರು ಆರ್ಯ ಸಮಾಜವನ್ನೂ ಕೂಡ ಸೇರಿಕೊಂಡಿದ್ದರು. ಇವರು ವಿದ್ಯಾರ್ಥಿದೆಸೆಯಿಂದಲೂ ಕೂಡ ವಿದ್ಯಾರ್ಥಿ ಚಳುವಳಿಗಳಲ್ಲಿ, ಕ್ವಿಟ್ ಇಂಡಿಯಾ ಮೂವ್‌ಮೆಂಟ್‌ನಲ್ಲಿ ಮತ್ತು ಸ್ವಾತಂತ್ರ್ಯದ ಇತರ ಹೋರಾಟಗಳಲ್ಲಿ ಭಾಗಿಯಾಗಿದ್ದಂಥವರು. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಈ ದೇಶದ ಸ್ವಾತಂತ್ರಕ್ಕೋಸ್ಕರ ಸೆರಮನೆ ವಾಸವನ್ನೂ ಕೂಡ ಅನುಭವಿಸಿದ್ದರು. 1952ರ ಮೊದಲನೆಯ ವಿಧಾನಸಭೆಯ ಚುನಾವಣೆಯಲ್ಲಿ ಹೈದ್ರಾಬಾದ್ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅಂದರೆ ಕರ್ನಾಟಕ ಏಕೀಕರಣವಾಗುವುದಕ್ಕೆ ಮುಂಚಿತವಾಗಿ ಸ್ವಾತಂತ್ರ್ಯ ಬಂದಮೇಲೆ ಮೊದಲನೆಯ ಸಾರ್ವತ್ರಿಕ

ಚುನಾವಣೆಯಲ್ಲಿ ಹೈದ್ರಾಬಾದ್ ವಿಧಾನಸಭೆಗೆ ಆಯ್ಕೆಯಾಗಿ ತದನಂತರ ಏಕೀಕರಣವಾದ ಮೇಲೆ 1957 ರಲ್ಲಿ ಮತ್ತು 1967 ರಲ್ಲಿ ಪಕ್ಷೇತರರಾಗಿ ಆಯ್ಕೆಯಾಗಿದ್ದಾರೆ. ಮೂರು ಸಾರಿ ಸ್ವತಂತ್ರವಾಗಿ ಗೆದ್ದಿದ್ದಾರೆ. 1952, 1957 ಮತ್ತು 1967 ರಲ್ಲಿ ಮೂರು ಬಾರಿ ಕೂಡ ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿರತಕ್ಕಂಥದ್ದು. ಇವರಿಗೆ ಆ ಭಾಗದ ಜನರು ಇವರ ಜನಸೇವೆ ಮತ್ತು ಇವರ ಹೋರಾಟವನ್ನು ಮೆಚ್ಚಿ ಇವರನ್ನು ಗೌರವದಿಂದ ಮತ್ತು ಅಭಿಮಾನದಿಂದ ಸರ್ದಾರ್ ಎಂದೇ ಕರೆಯುತ್ತಿದ್ದರು. ನಾವು ಯಾವ ರೀತಿ ವಲ್ಲಬಬಾಯಿ ಪಟೇಲ್‌ರವರನ್ನು ಸರ್ದಾರ್ ವಲ್ಲಭಬಾಯಿ ಪಟೇಲ್ ಎಂದು ಕರೆಯುತ್ತಿದ್ದೆವೋ ಅದೇ ರೀತಿ ಇವರನ್ನು ಸರ್ದಾರ್ ಇನಾಮ್‌ದಾರರೆಂದು ಆ ಭಾಗದ ಜನರು ಕರೆಯುತ್ತಿದ್ದರು. ಇವರು ಒಬ್ಬ ಸ್ವಾತಂತ್ರ್ಯ ಸೇನಾನಿಯಾಗಿದ್ದರಲ್ಲದೇ ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಕೂಡ ಭಾಗಿಯಾಗಿದ್ದರು. ಆ ಭಾಗದಲ್ಲಿ ಬಹಳ ಗೌರವಕ್ಕೆ ಪಾತ್ರರಾಗಿದ್ದಂಥವರು. ಸಮಾಜ ಸೇವೆಯಲ್ಲಿ ಬಹಳ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದಂಥವರಾಗಿದ್ದರು. ಇವರು ರಾಜಕಾರಣದಲ್ಲಿ ಮೌಲಿಕ ರಾಜಕಾರಣವನ್ನು ಮಾಡಿದಂಥವರಾಗಿದ್ದರು. ಅಂಥ ವ್ಯಕ್ತಿ ಇಂದು ನಮ್ಮನ್ನಗಲಿದ್ದಾರೆ. ಇವರ ಅಗಲಿಕೆಯಿಂದ ಸಮಾಜಕ್ಕೆ ದೊಡ್ಡ ನಷ್ಟವಾಗಿದೆಯೆಂದು ನಾವು ಭಾವಿಸಿಕೊಂಡಿದ್ದೇವೆ. ಅಂಥವರ ಆದರ್ಶಗಳು, ಅವರ ಹೋರಾಟದ ಬದುಕು, ಸದಾ ಯುವ ಸಮೂಹದ ಮೇಲೆ ಮತ್ತು ನಮಗೆ ಮತ್ತು ಸಾರ್ವಜನಿಕ ಜೀವನದಲ್ಲಿರತಕ್ಕಂಥವರೆಲ್ಲರಿಗೂ ಮಾರ್ಗದರ್ಶಕವಾಗಿರತಕ್ಕಂಥದ್ದಾಗಿದೆ. ಇವತ್ತು ಬಹಳ ಸ್ವಾತಂತ್ರ್ಯ ಹೋರಾಟಗಾರರು ನಮ್ಮನ್ನು ಅಗಲಿ ಹೋಗುತ್ತಿದ್ದಾರೆ. ಆದರೆ ಅವರ ಬದುಕು ಮತ್ತು ಆದರ್ಶ ಜೀವನ ಮಾತ್ರ ನಮ್ಮಲ್ಲಿ ಉಳಿಯುತ್ತಿವೆ. ಅದನ್ನು ನಾವೆಲ್ಲರೂ ಕೂಡ ಪಾಲನೆ ಮಾಡಿದರೆ ಸಮಾಜಕ್ಕೆ, ದೇಶಕ್ಕೆ, ನಾಡಿಗೆ ಬಹಳ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಸ್ವಾತಂತ್ರ್ಯ ಹಿರಿಯ ಸೇನಾನಿ ಸರ್ದಾರ್ ಶರಣಗೌಡ ಇನಾಮ್‌ದಾರ್ ಅವರು ದಿನಾಂಕ: 03.03.2010ರಂದು ನಿಧನ ಹೊಂದಿದ್ದಾರೆ. ತಾವೇನು ಇವತ್ತು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಶ್ರೀಯುತರು 15ನೇ ಆಗಸ್ಟ್ 1920 ರಲ್ಲಿ, ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ದುಮ್ಮದ್ರಿಯಲ್ಲಿ ಜನಿಸಿದ್ದು, ಬಿ.ಎ. ಪದವೀಧರರಾಗಿದ್ದರು. ವಿದ್ಯಾರ್ಥಿ ದೆಸೆಯಿಂದಲೇ ಹೋರಾಟದ ಮನೋಭಾವ ಬೆಳೆಸಿಕೊಂಡಿದ್ದು, 1938 ರಲ್ಲಿ ಆರ್ಯ ಸಮಾಜದ ಕರೆಯ ಮೇರೆಗೆ "ವಂದೇ ಮಾತರಂ" ಚಳುವಳಿಯಲ್ಲಿ ಭಾಗವಹಿಸಿದ್ದರಲ್ಲದೇ ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯ ನೇತೃತ್ವ ವಹಿಸಿದ್ದರು. "ಭಾರತ ಬಿಟ್ಟು ತೊಲಗಿ" ಹೋರಾಟದಲ್ಲಿ ಪಾಲ್ಗೊಂಡಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿಯೂ ಹೋರಾಡಿ ಸೆರಮನೆ ವಾಸ ಅನುಭವಿಸಿದ್ದರು. ಶ್ರೀಯುತರು 1952 ರಲ್ಲಿ ಹೈದ್ರಾಬಾದ್ ವಿಧಾನಸಭೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದು, 1957 ಮತ್ತು 1967 ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕರ್ನಾಟಕ ವಿಧಾನಸಭೆ ಜೇವರ್ಗಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದಂಥ ಇವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಮತ್ತು ಅವರ ಅಗಲಿಕೆಯಿಂದ ಉಂಟಾಗಿರುವ ದು:ಖವನ್ನು ಭರಿಸತಕ್ಕ ಶಕ್ತಿಯನ್ನು ಅವರ ಕುಂಟುಂಬದವರಿಗೆ ಭಗವಂತ ಕೊಡಲೆಂದು ಪ್ರಾರ್ಥಿಸಿ ತಾವು ತಂದಿರತಕ್ಕ ಸಂತಾಪ ಸೂಚನೆಯನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಎಲ್ಲ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.